ಮಂತ್ರಿತರ ಹಿಂದುಳಿದ ವರ್ಗಗಳಿಗೆ ಸಂದರ್ಶನಕ್ಕೆ ಕರೆಯಲು ಸಮಾನ ಪ್ರಮಾಣವನ್ನು ನೀಡಿದಂತಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ಲಕ್ಷ್ಮೀಸಾಗರ್.— ಸದರಿ ಪಟ್ಟಿಯನ್ನು ಸದನದ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಉತ್ತರಗಳ ಪಟ್ಟಿಯನ್ನು ಮಂಡಿಸಲಾಯಿತು.

Providing of Quarters to Sub-Inspectors of Bantwala

556. SRI B A UMARABBA(Vittal).—Will the Minister for Home by pleased to state ?

a) is there residential quarters to the Police Sub-Inspector of Bantwal Police Station in Daskhina Kannada District

b) if so what are the reasons for the Police Sub-Inspector to live in the private house of the Excise Contractor instead of living in an official quarter

SRI B. RACHAIAH (Home Minister).—

a) Government quarters is available.

b) The earmarked quarters for Police Sub-Inspector was not vacant as it was in occupation by the family of his predecessor. Since it was imperative for the police Sub-Inspector to shift his family he has occupied the house of a Arrack Sub-contractor. On 29-1-1986 he has occupied the Government Quarters.

ಅಮಾನತ್ತಿನಲ್ಲಿಡಲಾದ ಸರ್ಕಾರಿ ನೌಕರರ ಸಂಖ್ಯೆ ಬಗ್ಗೆ

೧೩೪. ಶ್ರೀ ಬಿ ಆರ್ ನೀಲಕಂಠಪ್ಪ (ತರೀಕೆರೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಜನತಾ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಅಮಾನತ್ತಿನಲ್ಲಿಡಲಾದ ಸರಕಾರಿ ನೌಕರರ ಸಂಖ್ಯೆ ಹಾಗೂ ಈ ಹಿಂದೆ ಅಮಾನತ್ತಿನಲ್ಲಿಡಲಾದ ನೌಕರರ ಸಂಖ್ಯೆ ಎಷ್ಟು,

ಆ) ಅಮಾನತ್ತಿನಲ್ಲಿದ್ದು ಪುನರ್ ಕೆಲಸಕ್ಕೆ ಹಾಜರಾದನೌಕರರ ಸಂಖ್ಯೆ ಹಾಗೂ ಪ್ರಸಕ್ತ ಸರಕಾರದ ಅವಧಿಯಲ್ಲಿ ವಿಚಾರಣೆಯಾಗದೇ ಇರುವ ನೌಕರರ ಸಂಖ್ಯೆ ಎಷ್ಟು,

ಇ) ವಿಚಾರಣೆಯಾಗಿ ಮರುಕೆಲಸಕ್ಕೆ ನೇಮಿಸದೇ ಇರುವುದಂ ಸರಕಾರದವರ ಗಮನಕ್ಕೆ ಬಂದಿದೆಯೇ

ಈ) ಹಾಗಿದ್ದಲ್ಲಿ ಇದರ ಬಗ್ಗೆ ಕೈಗೊಂಡ ಕ್ರಮವೇನಂ

ಉ) ಅಮಾನತ್ತಿನಲ್ಲಿ ಇರುವ ಸರಕಾರಿ ನೌಕರರನ್ನು ೬ ತಿಂಗಳ ಅವಧಿಯೊಳಗೆ ವಿಚಾರಣೆ ಮುಗಿದಿದ್ದರೂ ಅಥವಾ ಮುಗಿಯದಿದ್ದರೂ ಪುನರ್ ಕರ್ತವ್ಯಕ್ಕೆ ತೆಗೆದುಕೊಳ್ಳಬೇಕೆಂದು ಸರಕಾರಿ ಆಜ್ಞೆ ಇದ್ದಾಗ್ಯೂ ಸಹ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳದೆ ಅನ್ಯತಾ ಕೆಲಸವಿಲ್ಲದೆ ಸಂಬಳ ಕೊಡುತ್ತಿರುವುದು ಸರಿಯೇ ?

ಶ್ರೀ ರಾಮಕೃಷ್ಣ ಹೆಗಡೆ (ಮಂತ್ರಿ ಮಂತ್ರಿಗಳು).—

ಅ) ಈಗ ಲಭ್ಯವಿರುವ ಮಾಹಿತಿಯಂತೆ ದಿನಾಂಕ ೩೦-೬-೧೯೮೫ ರಂದು ಕೆಲಸಕ್ಕೆ ಮತ್ತು ಪುನರ್ನೇಮಿಸಿಕೊಳ್ಳಲ್ಪಟ್ಟ ೨೬೫ ನೌಕರರನ್ನು ಹೊರತುಪಡಿಸಿ ಒಟ್ಟು ೯೫೩.

ಆ) ಸರಕಾರಿ ನೌಕರರು ಅಮಾನತ್ತಿನಲ್ಲಿದ್ದರು. ಜನತಾ ಸರಕಾರ ಅಧಿಕಾರಕ್ಕೆ ಬರುವ ಮೊದಲು ಅಮಾನತ್ತಿನಲ್ಲಿಡಲ್ಪಟ್ಟ ಸರಕಾರಿ ನೌಕರರ ಸಂಖ್ಯೆ ಬಗ್ಗೆ ಮಾಹಿತಿ ಇಲ್ಲ.

ಇ) ಇಲ್ಲ.

ಈ) 'ಇ'ಯಲ್ಲಿ ಕೊಟ್ಟಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ದಿನಾಂಕ ೩-೨-೧೯೮೫ ರಂದು ಹೊರಡಿಸಿದ ಪರಿಷ್ಕೃತ ಆದೇಶದ ಪ್ರಕಾರ ಅಮಾನತ್ತಿನಲ್ಲಿಡಲಾದ ಸರಕಾರಿ ನೌಕರರನ್ನು ಒಂದು ವರ್ಷದ ಅವಧಿ ಕಳೆದ ನಂತರವೂ ಅವಶ್ಯವಿದ್ದಲ್ಲಿ ಅಮಾನತ್ತಿನಲ್ಲಿ ಮುಂದುವರೆಸಬಹುದಾಗಿದೆ.

ಪತ್ರಿಕೆಗಳಿಗೆ ಸರಕಾರಿ ಜಾಹೀರಾತು ನೀಡಿರುವ ಬಗ್ಗೆ

೪೩೩. ಶ್ರೀ ಜಿ.ಎಸ್. ಆಚಾರ್ (ಬೈಂದೂರು) —ಮಾನ್ಯ ವಾರ್ತಾ ಯುವಜನ ಸೇವಾ ಕ್ರೀಡೆ ಹಾಗೂ ಪ್ರವಾಸೋದ್ಯಮ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ೧೯೮೪-೮೫ ಮತ್ತು ೧೯೮೫-೮೬ರಲ್ಲಿ ಸರ್ಕಾರದ ವಾರ್ತಾ ಇಲಾಖೆಯ ಮೂಲಕ ಮೊದಲ ೯ ತಿಂಗಳಲ್ಲಿ ಎಷ್ಟು ಪರಿಮಾಣದ ಜಾಹೀರಾತುಗಳು ನೀಡಲ್ಪಟ್ಟಿವೆ ?

ಆ) ಅವುಗಳಲ್ಲಿ ಎಷ್ಟು.—ಅ) ಸಣ್ಣ ಪತ್ರಿಕೆಗಳಿಗೆ

ಆ) ಇತರ ಪತ್ರಿಕೆಗಳಿಗೆ

ಇ) ಸ್ಮರಣ ಸಂಚಿಕೆಗಳಿಗೆ

ಎಷ್ಟೆಷ್ಟು ಮೌಲ್ಯದ ಜಾಹೀರಾತು ನೀಡಲಾಯಿತು ?

ಶ್ರೀ ಜೀವರಾಜ ಆಳ್ವ (ವಾರ್ತಾ ಯುವಜನ ಸೇವಾ ಕ್ರೀಡೆ ಹಾಗೂ ಪ್ರವಾಸೋದ್ಯಮ ಮಂತ್ರಿಗಳು).—

	೧೯೮೪-೮೫	೧೯೮೫-೮೬
	೧-೪-೧೯೮೪ ರಿಂದ ೩೧-೧೨-೧೯೮೪ರವರೆಗೆ (೯ ತಿಂಗಳಲ್ಲಿ ನೀಡಿದಂತ ಜಾಹೀರಾತಿನ ಮೌಲ್ಯ)	೧-೪-೧೯೮೫ರಿಂದ ೩೧-೧೨-೧೯೮೫ರವರೆಗೆ (೯ ತಿಂಗಳಲ್ಲಿ ನೀಡಿರುವ ಜಾಹೀರಾತಿನ ಮೌಲ್ಯ)
ಅ)	ರೂ. ೮೮,೩೭,೮೭೭-೦೦	ರೂ. ೯೧,೮೬,೧೭೦-೫೦
ಆ)	ರೂ. ೨೩,೭೩,೧೫೧-೨೫	ರೂ. ೨೦,೦೫,೬೭೩-೦೦
	ರೂ. ೬೨,೧೩,೨೪೫-೭೫	ರೂ. ೫೬,೭೪,೭೮೨-೭೫
	ರೂ. ೨,೫೧,೪೩೦-೦೦	ರೂ. ೫,೦೫,೮೧೪-೭೫
	ರೂ. ೮೮,೩೭,೮೭೭-೦೦	ರೂ. ೯೧,೮೬,೧೭೦-೫೦